# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1787 |
| ಸದಸ್ಯರ ಹೆಸರು | ಶ್ರೀ ಎಂ.ನಾರಾಯಣಸ್ವಾಮಿ |
| ಉತ್ತರಿಸುವ ದಿನಾಂಕ | 19/03/2021 |
| ಉತ್ತರಿಸುವವರು | ತೋಟಗಾರಿಕೆ ಮತ್ತು ರೇಷ್ಮೆ ಸಚಿವರು |

| | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೇಷ್ಮೆ ಬೆಳೆ / ಸಾಗಾಣಿಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಇಲಾಖೆಯು ರೇಷ್ಮೆ ಬೆಳೆಯನ್ನು ಉತ್ತೇಜಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿದೆ.<br>1. ಹಿಪ್ಪುನೇರಳೆ ನರ್ಸರಿ ಬೆಳೆಸುವುದು, ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ, ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ, ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳ ಖರೀದಿ, ಮೌಂಟಿಂಗ್ ಹಾಲ್ ನಿರ್ಮಾಣ ಮತ್ತು ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳ ಸ್ಥಾಪನೆಗೆ ಸಹಾಯಧನ.<br>2. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ.<br>3. ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ಪ್ರತಿ ಕೆ.ಜಿ. ಮಿಶ್ರತಳಿಗೆ ರೂ.30/- ಮತ್ತು ದ್ವಿತಳಿಗೆ ರೂ.50/- ರಂತೆ ನೀಡಲಾಗುತ್ತಿದೆ.<br>4. ದ್ವಿತಳಿ ಬಿತ್ತನೆ ಬೆಳೆಗಾರರು ಹಾಗೂ ಮೈಸೂರು ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ.<br>5. ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>6. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. |
| ಆ) | ರೇಷ್ಮೆ ಉತ್ಪಾದನೆಗಾಗಿ ರೇಷ್ಮೆ ಹುಳುಗಳು ದೊರೆಯುವ ಬಗ್ಗೆ ಹಾಗೂ ಉತ್ಪಾದನೆಗೆ ಸಂಬಂಧಿಸಿದ ಮಾಹಿತಿಯನ್ನು ಹೇಗೆ ಪಡೆಯಬಹುದು; | ರಾಜ್ಯದಲ್ಲಿ ರೇಷ್ಮೆ ಗೂಡು ಉತ್ಪಾದನೆಗಾಗಿ ರೇಷ್ಮೆ ಹುಳುಗಳು ದೊರೆಯುವ ಸೌಲಭ್ಯವನ್ನು 247 ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ.<br>ರೇಷ್ಮೆ ಬೆಳೆಗಾರರು ತಮ್ಮ ಗ್ರಾಮಕ್ಕೆ ಹತ್ತಿರವಿರುವ ಯಾವುದೇ ರೇಷ್ಮೆ ಇಲಾಖಾ ಕಛೇರಿಯನ್ನು ಸಂಪರ್ಕಿಸಿ ರೇಷ್ಮೆ ಕೃಷಿಯ ಬಗ್ಗೆ ಮಾಹಿತಿ ಪಡೆಯಬಹುದು. |

| | | |
|---|---|---|
| ಇ) | ರಾಜ್ಯದಲ್ಲಿ ರೇಷ್ಮೆ ಬೆಳೆಯುವ ರೈತರಿಗೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಲು ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ; | ರೇಷ್ಮೆ ಇಲಾಖೆಯ ಕ್ಷೇತ್ರಮಟ್ಟದ ಎಲ್ಲಾ ಕಚೇರಿಗಳಲ್ಲಿ ರೇಷ್ಮೆ ಬೆಳೆಗಾರರಿಗೆ ಇಲಾಖೆಯಿಂದ ದೊರೆಯುವ ಸಹಾಯಧನ/ಪ್ರೋತ್ಸಾಹಧನ ವಿವರಗಳನ್ನು ಹಾಗೂ ಆಧುನಿಕ ರೇಷ್ಮೆ ಪದ್ಧತಿಯನ್ನು ಅಳವಡಿಸಿಕೊಳ್ಳಲು ತಾಂತ್ರಿಕ ಮಾಹಿತಿಗಳನ್ನು ಫಲಕಗಳಲ್ಲಿ ಪ್ರದರ್ಶಿಸಲಾಗಿದೆ. ಹೊಸ ತಾಂತ್ರಿಕತೆ ಮತ್ತು ನೂತನ ಅವಿಷ್ಕಾರಗಳ ಬಗ್ಗೆ ಕರಪತ್ರ, ಬ್ರೋಚರ್ ಮತ್ತು ಭಿತ್ತಿ ಪತ್ರಗಳ ಮೂಲಕ ರೇಷ್ಮೆ ಬೆಳೆಗಾರರಿಗೆ ಮಾಹಿತಿ ನೀಡಲಾಗುತ್ತಿದೆ. ರೇಷ್ಮೆ ಬೆಳೆಗಾರರ ಹಿಪ್ಪುನೇರಳೆ ತೋಟ ಹಾಗೂ ರೇಷ್ಮೆ ಹುಳು ಸಾಕಾಣಿಕೆಯ ವೀಕ್ಷಣೆ ಸಮಯದಲ್ಲಿ ಅವಶ್ಯ ತಾಂತ್ರಿಕ ಸಲಹೆಗಳನ್ನು ನೀಡಲಾಗುತ್ತಿದೆ.<br>ಅಲ್ಲದೇ, ರೇಷ್ಮೆ ಬೆಳೆಗಾರರಿಗೆ ಕ್ಷೇತ್ರಮಟ್ಟದಲ್ಲಿ ನೂತನ ತಾಂತ್ರಿಕತೆಗಳ ಬಗ್ಗೆ, ಕಾರ್ಯಾಗಾರ, ಕ್ಷೇತ್ರೋತ್ಸವಗಳು, ವಸ್ತುಪ್ರದರ್ಶನ, ಗ್ರಾಮಮಟ್ಟದಲ್ಲಿ ರೈತರಿಂದ ರೈತರಿಗೆ ತರಬೇತಿ, ರೇಷ್ಮೆ ತರಬೇತಿ ಸಂಸ್ಥೆಗಳಿಂದ ಕ್ಷೇತ್ರಮಟ್ಟದಲ್ಲಿ ರೈತರಿಗೆ ಒಂದು ದಿನ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ರೇಷ್ಮೆ ಬೆಳೆಗಾರರಲ್ಲಿ ತಾಂತ್ರಿಕ ಅರಿವು ಮೂಡಿಸಲಾಗುತ್ತಿದೆ.<br>ದೂರದರ್ಶನ ಹಾಗೂ ರೇಡಿಯೋ ಮೂಲಕ ವಿಜ್ಞಾನಿಗಳು, ತಾಂತ್ರಿಕ ಅಧಿಕಾರಿಗಳು ಚರ್ಚೆಗಳಲ್ಲಿ ಭಾಗವಹಿಸಿ, ಅಗತ್ಯ ತಾಂತ್ರಿಕ ಮಾಹಿತಿಯನ್ನು ರೇಷ್ಮೆ ಬೆಳೆಗಾರರಿಗೆ ನೀಡುತ್ತಿದ್ದಾರೆ. |
| ಈ) | ರೈತರಿಗೆ ರೇಷ್ಮೆ ಗೂಡು ಮಾರಲು, ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ/ರೇಷ್ಮೆ ನೂಲು ಬಿಚ್ಚಾಣಿಕಾದಾರರಿಗೆ ರೇಷ್ಮೆ ಗೂಡಿನ ವಹಿವಾಟಿಗಾಗಿ 55 ರೇಷ್ಮೆ ಗೂಡಿನ ಮಾರುಕಟ್ಟೆಗಳು ಮೂಲಭೂತ ಸೌಲಭ್ಯಗಳಾದ ಆಸನದ ವ್ಯವಸ್ಥೆ, ಶುದ್ಧ ಕುಡಿಯುವ ನೀರು/ಶೌಚಾಲಯ ಮುಂತಾದ ವ್ಯವಸ್ಥೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಮುಂದುವರೆದು, ಜನರೇಟರ್, ಸೋಲಾರ್ ಪವರ್ ಪ್ಲಾಂಟ್ ಎಲೆಕ್ಟ್ರಾನಿಕ್ ತೂಕ ಯಂತ್ರ, ಸಿ.ಸಿ.ಟಿ.ವಿ. ಸಹ ಅಳವಡಿಸಲಾಗಿರುತ್ತದೆ. |

| | | |
|---|---|---|
| | | ರೇಷ್ಮೆ ಗೂಡಿನ ವಹಿವಾಟಿನಲ್ಲಿ ಪಾರದರ್ಶಕತೆಗಾಗಿ ಮತ್ತು ಸ್ಪರ್ಧಾತ್ಮಕ ಧಾರಣೆಗಾಗಿ ಪ್ರಮುಖ ಮಾರುಕಟ್ಟೆಗಳಲ್ಲಿ ಇ-ಹರಾಜು ವಿಧಾನ ಜಾರಿಯಲ್ಲಿದೆ.<br><br>ರೇಷ್ಮೆ ಬೆಳೆಗಾರರಿಗೆ ನಗದು ಸೌಲಭ್ಯ ಬದಲಾಗಿ ಆನ್‌ಲೈನ್ ಮೂಲಕ ಇ-ಹಣ ಪಾವತಿ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>ರೇಷ್ಮೆ ಗೂಡಿನ ಗುಣಮಟ್ಟ ನಿರ್ಧರಿಸಲು ವರ್ಗೀಕರಣ / ಶ್ರೇಣೀಕರಣದ ವಿಧಾನದಲ್ಲಿ ರೇಷ್ಮೆ ಗೂಡು ಪರೀಕ್ಷಿಸಲು ಪರೀಕ್ಷಾ ಪ್ರಯೋಗಾಲಯಗಳನ್ನು ಪ್ರಾರಂಭಿಸಲಾಗುತ್ತಿದೆ. |
| ಉ) | ರೇಷ್ಮೆ ಬೆಳೆಗೆ ಬೆಂಬಲ ಬೆಲೆ ನೀಡಲು ಮೀಸಲಿಟ್ಟಿರುವ ಅನುದಾನವೆಷ್ಟು? (ಸೂಕ್ತ ಮಾಹಿತಿಯನ್ನು ನೀಡುವುದು). | ರೇಷ್ಮೆ ಬೆಳೆಗೆ ಬೆಂಬಲ ಬೆಲೆ ನೀಡುವ ಕಾರ್ಯಕ್ರಮ ಇರುವುದಿಲ್ಲ, ಆದರೆ ರೇಷ್ಮೆ ಬೆಳೆಯನ್ನು ಉತ್ತೇಜಿಸುವ ಸಲುವಾಗಿ ಎಲ್ಲಾ ಬೆಳೆಗಾರರಿಗೆ 2020-21ನೇ ಸಾಲಿನಲ್ಲಿ ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ರೂ.30/- ಮತ್ತು ದ್ವಿತಳಿ ಗೂಡಿಗೆ ರೂ.50/-ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ.45.00ಕೋಟಿಗಳ ಅನುದಾನವನ್ನು ಮೀಸಲಿಟ್ಟಿದ್ದು. ಇಲ್ಲಿಯವರೆಗೆ 73,774 ರೇಷ್ಮೆ ಬೆಳೆಗಾರರಿಗೆ ರೂ.38.53 ಕೋಟಿಗಳ ಪ್ರೋತ್ಸಾಹಧನವನ್ನಾಗಿ ವಿತರಿಸಲಾಗಿದೆ. |

**ಸಂಖ್ಯೆ: ರೇಷ್ಮೆ 67 ರೇಕೃವಿ 2021**

**(ಆರ್.ಶಂಕರ್)**
**ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**